ಪಿ ಅಂಡ್ ಎಸ್ಸಿ.ನಂ.228/2015
ಪಿ.ಡಬ್ಲ್ಯೂ.01

(ಮಮ್ತಾಜ್)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ದಿಃ30-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟಿಸವಾಲು ಃ ಪ್ರತಿವಾದಿ ಪರ ಶ್ರೀ. ವಿ.ಆರ್.ಬಿ ವಕೀಲರಿಂದ ಃ

1. ವಿಲ್ ಇರುವ ವಿಚಾರವನ್ನು ನನಗೆ ಚಿಕ್ಕರಾಮಯ್ಯ ಅವರು ಫೋನ್ ಮುಖಾಂತರ ತಿಳಿಸಿದ್ದರು. ಯಾವ ದಿನಾಂಕದಂದು ನನಗೆ ತಿಳಿಸಿದ್ದರು ಎಂದು ನೆನಪಿಲ್ಲ. ಆ ಸಂದರ್ಭದಲ್ಲಿ ನಾನು ಬೆಂಗಳೂರಿನಲ್ಲಿದ್ದೆ. ಚಿಕ್ಕರಾಮಯ್ಯನವರು 2014 ರಲ್ಲಿ ನನಗೆ ವಿಲ್ ಇರುವ ವಿಚಾರ ತಿಳಿಸಿದ್ದರು. ನನಗೆ ಮೊದಲು ವಿಲ್ಲನ್ನು ಚಿಕ್ಕರಾಮಯ್ಯ ಅವರು ನೀಡಿದ್ದರು ಆದರೆ ದಿನಾಂಕ ನೆನಪಿಲ್ಲ.

ಚಿಕ್ಕರಾಮಯ್ಯ ಅವರು ಸೆಣಬ ಗ್ರಾಮದಲ್ಲಿ ನನಗೆ ವಿಲ್ಲನ್ನು ನೀಡಿದ್ದರು. ಸದರಿ ವಿಲ್ಲನ್ನು ನೀಡುವ ಸಂದರ್ಭದಲ್ಲಿ ನಾನು, ನಾಗರಾಜು ಹಾಗೂ ಚಿಕ್ಕರಾಮಯ್ಯ ಇದ್ದರು. ವಿಲ್ ಸಿಕ್ಕಿದ ನಂತರ ನಾನು ಆ ವಿಚಾರವನ್ನು ನನ್ನ ಅಕ್ಕಂದಿರು, ತಂಗಿ, ತಾಯಿ ಹಾಗೂ ಅಣ್ಣ ಅವರಿಗೆ ತಿಳಿಸಿದ್ದೆ. ಈ ಮೇಲೆ ಹೇಳಿದ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ಅರ್ಜಿಯಲ್ಲಿ ಹೇಳಿಲ್ಲ. ಸಾಕ್ಷಿ ಮುಂದುವರಿದು ಅರ್ಜಿಯಲ್ಲಿ ಹೇಳಿದ್ದೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

2. ವಿಲ್ಲಿನಲ್ಲಿ ವಿಶ್ವನಾಥ್ ಅವರ ಹೆಸರು ಉಲ್ಲೇಖ ಆಗಿದೆ ಎಂದು ನಾನು ಹೇಳಿದ ಕಾರಣ ಅವರನ್ನೂ ಸಹ ಸೇರಿಸಿ ಈ ಅರ್ಜಿಯನ್ನು ದಾಖಲಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಈ ಅರ್ಜಿಯನ್ನು ಸಲ್ಲಿಸುವ ಮೊದಲು ವಿಶ್ವನಾಥ್ ಅವರಿಗೆ ಲಿಖಿತವಾಗಿ ನೋಟೀಸು ಸಲ್ಲಿಸಿ ಅರ್ಜಿ ಹಾಕಲು ಬಾ ಎಂದು ಕೇಳಿದ್ದೀರಾ ಎಂದರೆ ಸಾಕ್ಷಿ ನಾನು ಮೌಖಿಕವಾಗಿ ಕೇಳಿದ್ದೇನೆ ಎಂದು ನುಡಿಯುತ್ತಾರೆ.

3. ದಿನಾಂಕ 22.05.2015 ರಂದು ಎಲ್ಲಾ ಆಸ್ತಿಗಳ ಮೇಲೆ ಜಂಟಿ ಖಾತೆಯಾಗಿತ್ತು ಎಂದರೆ ಸಾಕ್ಷಿ ಅದು ಸುಳ್ಳು ದಾಖಲೆ ಎಂದು

ನುಡಿಯುತ್ತಾರೆ. 2014 ರಿಂದ ದಿನಾಂಕ 22.05.2015 ರ ಒಳಗೆ ವಿಲ್ಲಿನ ಆಧಾರದಲ್ಲಿ ನನಗೆ ಖಾತೆ ಮಾಡಿಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇದ್ದಿರಲಿಲ್ಲ ಆದರೆ ನಾನು ಅರ್ಜಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೀರಾ ಎಂದರೆ ನನಗೆ ನೆನಪಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಸದರಿ ಅರ್ಜಿಯನ್ನು ಬಿಬಿಎಂಪಿಗೆ ಸಲ್ಲಿಸಿದ್ದೆ. ಸದರಿ ಅರ್ಜಿಯ ಪ್ರತಿ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಬಿಬಿಎಂಪಿಗೆ ನೀಡಿದ ಅರ್ಜಿ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಜಂಟಿ ಖಾತೆಯಾಗುವವರೆಗೂ ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲ ಮತ್ತು ಆ ಕಾಲದಲ್ಲಿ ಯಾವುದೇ ವಿಲ್ ಇದ್ದಿರಲಿಲ್ಲ ಎಂದರೆ ಸುಳ್ಳು. ಜಂಟಿ ಖಾತೆಯಾದ ನಂತರ ಪ್ರಾ.ಸಾ.2 ಹಾಗೂ 3 ರವರ ಜೊತೆ ಸೇರಿಕೊಂಡು ನಾನು ನಿ.ಪಿ.1 ಹಾಗೂ 2 ರ ವಿಲ್ಲನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ಹಾಗೂ 2 ಸೃಷ್ಟೀಕೃತ ವಿಲ್ ಎಂದು ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ಹಾಜರು ಮಾಡಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ತಂದೆ ಈ ದಾವೆಗೆ ಸಂಬಂಧಿಸಿದ ಆಸ್ತಿಗಳನ್ನು ತಾವೇ ಉಳಿಸಿಕೊಂಡಿದ್ದರು ಎಂದು ತೋರಿಸಲು ನಾನು ಯಾವುದಾದರೂ

ದಾಖಲೆಗಳನ್ನು ಹಾಜರುಪಡಿಸಿದ್ದೀನಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಈ ಅರ್ಜಿಯಲ್ಲಿ ವಿವರಿಸಿದ ಆಸ್ತಿಗಳನ್ನು ಯಾವ ಆಧಾರದಲ್ಲಿ ಉಳಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಅದನ್ನು ನಾನು ಅರ್ಜಿಯಲ್ಲಿ ತಿಳಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಅರ್ಜಿಯ ಪ್ಯಾರಾ ನಂ.4 ರಲ್ಲಿ ನಾನು ನನ್ನ ತಂದೆ ನಮ್ಮ ಮನೆಯ ಎಲ್ಲಾ ಸದಸ್ಯರಿಗೂ ಲಿಖಿತವಾಗಿ ವ್ಯವಸ್ಥೆಯನ್ನು ಮಾಡಿ ತಾನೂ ಸಹ ಕೆಲವು ಆಸ್ತಿಗಳನ್ನು ಉಳಿಸಿಕೊಂಡಿದ್ದಾರೆ ಎಂದು ಹೇಳಿದ್ದು ಸದರಿ ದಾಖಲೆಗಳ ಬಗ್ಗೆ ಅರ್ಜಿಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಲಿಖಿತವಾಗಿ ನಮ್ಮ ಮನೆಯ ಸದಸ್ಯರಿಗೆ ಮಾಡಿಕೊಟ್ಟ ವ್ಯವಸ್ಥೆ ಯಾವುದು ಎಂದು ನನ್ನ ತಂದೆಗೆ ಮಾತ್ರ ತಿಳಿದಿದೆ. ನನ್ನ ತಂದೆ ತಾನು ಉಳಿಸಿಕೊಂಡ ಆಸ್ತಿಗಳು ಯಾವ ಆಧಾರದಲ್ಲಿ ಬಂದಿದೆ ಎಂದೂ ಸಹ ನನ್ನ ತಂದೆಗೆ ಮಾತ್ರ ತಿಳಿದಿದೆ ಎಂದರೆ ಸಾಕ್ಷಿ ನನ್ನ ತಂದೆಗೆ ತಾನು ಪಿತ್ರಾರ್ಜಿತವಾಗಿ ಗಳಿಸಿದ ಮತ್ತು ಸ್ವಯಾರ್ಜಿತವಾಗಿ ಗಳಿಸಿದ ಆಸ್ತಿಗಳನ್ನು ಉಳಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಯಾವ ದಾಖಲೆಯ ಆಧಾರದಲ್ಲಿ ಆಸ್ತಿಗಳನ್ನು ಉಳಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ನಾನು ಅದನ್ನು ಒ.ಎಸ್.8804/2015 ರಲ್ಲಿ ಹಾಕಿದ್ದೇನೆ ಎಂದು ನುಡಿಯುತ್ತಾರೆ.

5. ಒ.ಎಸ್.8804/2015 ನನ್ನ ತಾಯಿ, ಅಣ್ಣ ಮತ್ತು 3 ಜನ ಸಹೋದರಿಯರು ನನ್ನ ವಿರುದ್ಧ ಪಾಲಿಗಾಗಿ ಹಾಕಿದ ದಾವೆ ಎಂದರೆ

ಸರಿ. ಈ ಅರ್ಜಿಯಲ್ಲಾಗಲೀ ಅಥವಾ ಓ.ಎಸ್.8804/2015 ರಲ್ಲಾಗಲೀ ನನ್ನ ತಂದೆ ಯಾವ ದಾಖಲೆಯ ಆಧಾರದಲ್ಲಿ ಆಸ್ತಿಗಳನ್ನು ಉಳಿಸಿಕೊಂಡಿದ್ದಾರೆ ಎಂದು ನಾನು ಹೇಳಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಿ.ಪಿ.1 ಹಾಗೂ 2 ರ ದಾಖಲೆಗಳಲ್ಲಿ ಕೆಲವು ಬೆಂಗಳೂರಿನ ಆಸ್ತಿಗಳು ಮತ್ತು ಕೆಲವು ತುಮಕೂರಿನ ಆಸ್ತಿಗಳು ಇವೆ ಎಂದರೆ ಸರಿ. ತುಮಕೂರಿನ ಆಸ್ತಿಗಳನ್ನು ನನ್ನ ತಂದೆಯವರು ತೆಗೆದುಕೊಂಡಿದ್ದರು. ಸದರಿ ತುಮಕೂರಿನ ಆಸ್ತಿಗಳನ್ನು ನನ್ನ ತಂದೆ ಯಾವಾಗ ಖರೀದಿಸಿದ್ದರು ಎಂಬುದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿದೆ ಎಂದು ನುಡಿಯುತ್ತಾರೆ. ಆ ವಿಚಾರವನ್ನು ಅರ್ಜಿಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಅದಕ್ಕೂ ಹಾಗೂ ಈ ದಾವೆಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

7. ದಾವೆ ದಾಖಲು ಮಾಡುವ ಸಂದರ್ಭದಲ್ಲಿ ಆಸ್ತಿಗಳ ಮ್ಯುಟೇಷನ್ ಹಾಗೂ ಖಾತೆ ಯಾವ ಹೆಸರಿನಲ್ಲಿ ಇತ್ತು ಎಂದು ಅರ್ಜಿಯಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಕಡತವನ್ನು ತೋರಿಸಿ ಪುನಃ ಅದೇ ಪ್ರಶ್ನೆಯನ್ನು ಕೇಳಿದಾಗ ಸಾಕ್ಷಿ ತಾನು ಶೆಡ್ಯೂಲನ್ನು ಮತ್ತು ಸರ್ವೇ ನಂಬರನ್ನು ಮಾತ್ರ ವಿವರಿಸಿದ್ದೇನೆ ಎಂದು ನುಡಿಯುತ್ತಾರೆ.

8. ನನ್ನ ತಂದೆ ಬೆಂಗಳೂರಿನ ಖಾಯಂ ನಿವಾಸಿ ಎಂದರೆ ಸರಿ. ನನ್ನ ತಂದೆ ಬೆಂಗಳೂರಿನಲ್ಲೇ ಎಲ್ಲಾ ವ್ಯವಹಾರಗಳನ್ನು ಮಾಡುತ್ತಾರೆ ಎಂದರೆ ಸಾಕ್ಷಿ ಅವರು ಬೆಂಗಳೂರು, ತುಮಕೂರು ಮತ್ತು ಇನ್ನಿತರ ಜಾಗಗಳಲ್ಲಿ ವ್ಯವಹಾರ ಮಾಡುತ್ತಾರೆ ಎಂದು ನುಡಿಯುತ್ತಾರೆ.

9. ನನ್ನ ತಂದೆಯ ಹೆಸರಿನಲ್ಲಿ ಒಂದು ಕ್ವಾಲಿಸ್ ಕಾರು ಮತ್ತು ಒಂದು ಮಾರುತಿ ಓಮ್ನಿ ಕಾರು ಇತ್ತಾ ಎಂದರೆ ಸುಳ್ಳು. ನನ್ನ ತಂದೆ ಎಲ್ಲಿ ಹೋಗಬೇಕಾದರೂ ಸದರಿ ಕ್ವಾಲಿಸ್ ಕಾರು ಮತ್ತು ಮಾರುತಿ ಓಮ್ನಿ ಕಾರಿನಲ್ಲಿ ತಿರುಗಾಡುತ್ತಿದ್ದರು ಎಂದರೆ ಸುಳ್ಳು.

10. ನನ್ನ ತಂದೆಯ ಜೀವಿತಾವಧಿಯಲ್ಲಿ ಅವರು ನ್ಯಾಯಾಲಯದಲ್ಲಿ ದಾವೆಗಳನ್ನು ಹಾಕಿದ್ದರು ಎಂದರೆ ಸರಿ. ನನ್ನ ತಂದೆಯ ವಕೀಲರು ರಂಗರಾಜನ್ ಮತ್ತು ಲಿಂಗಪ್ಪ ಎಂದರೆ ನನಗೆ ನೆನಪಿಲ್ಲ. ನನ್ನ ತಂದೆ ತನ್ನ ಕಾನೂನಿನ ವ್ಯವಹಾರಗಳನ್ನು ವಕೀಲರ ಮೂಲಕ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಯಾವ ಕಾಲಕ್ಕೂ ನನ್ನ ತಂದೆಗೆ ಸಹಾಯ ಮಡಿದ್ದಾಗಲೀ ಮತ್ತು ಅವರ ಜೊತೆ ಇದ್ದಿದ್ದಾಗಲೀ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಹೋದ ನಂತರ ಅವರ ಆಸ್ತಿಯನ್ನು ಒಳಗೆ ಹಾಕುವ ಉದ್ದೇಶದಿಂದ ನಾನು ಮೊದಲ ಬಾರಿಗೆ ಬಂದೆ ಎಂದರೆ ಸರಿಯಲ್ಲ.

ನನ್ನ ತಂದೆ ಜೀವಂತ ಇರುವ ಕಾಲದಲ್ಲಿ ನಾನು ಯಾವುದೇ ವ್ಯವಹಾರವನ್ನು ನೋಡಿಕೊಂಡಿದ್ದು ಇಲ್ಲ ಎಂದರೆ ಸರಿಯಲ್ಲ.

11. ನಿ.ಪಿ.1 ಮತ್ತು 2 ದಾಖಲೆಗಳನ್ನು ಯಾರು ಬರೆದವರು ಎಂದು ನನಗೆ ಗೊತ್ತಿಲ್ಲ. ಪ್ರಾ.ಸಾ.2 ಹಾಗೂ 3 ರವರ ಮುಖಾಂತರ ನಿ.ಪಿ.1 ಮತ್ತು 2 ದಾಖಲೆಗಳನ್ನು ಯಾರು ಬರೆದಿದ್ದಾರೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆ ರೀತಿಯ ಯಾವುದೇ ವಿಲ್ ಇಲ್ಲದ ಕಾರಣ ಬಿಕ್ಲಂದಾರರ ಸಹಿಯನ್ನು ನಾನು ಫೋರ್ಜರಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ರ ಬಿಕ್ಲಂದಾರರ ಸಹಿಯ ಕೆಳಗಡೆ ತಾರೀಖು, ಹೆಸರು, ಸೀಲು, ಡಿಎಲ್ ನಂಬ್ರ ಏನೂ ಇಲ್ಲ ಎಂದರೆ ಸಾಕ್ಷಿ ಊರು ತುಮಕೂರು ಎಂದು ಇದೆ. ಸಾಕ್ಷಿ ಮುಂದುವರಿದು ಹೆಸರು ಇದೆ ಎಂದು ನುಡಿಯುತ್ತಾರೆ. ಬಿಕ್ಲಂದಾರರ ಹೆಸರು ಏನು ಎಂದು ಕೇಳಿದರೆ ಸಾಕ್ಷಿ ಅದು ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ.

12. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ವಿಲ್ ತಾರೀಖು 07.01.2004 ಹಾಗೂ ಕೋಡಿಸೀಲ್ ತಾರೀಖು 05.02.2004 ಎಂದು ಬರೆದಿದ್ದು ಸದರಿ ಕೋಡಿಸೀಲನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ವಕೀಲರ ಬಳಿ 07.01.2004 ಹಾಗೂ 05.02.2004 ರ ವಿಲ್ಲನ್ನು ತೋರಿಸಿ ಮುಖ್ಯ ವಿಚಾರಣೆಯನ್ನು ಬರೆಸಿದ್ದೇನೆ

ಎಂದು ನುಡಿಯುತ್ತಾರೆ. ಆ ರೀತಿಯಾಗಿ ಕೋಡಿಸೀಲ್ ಎಂದು ಬರೆದಿರುವುದು ಸರಿಯಾಗಿದೆಯಾ ಅಥವಾ ತಪ್ಪಾಗಿದೆಯಾ ಎಂದರೆ ಸಾಕ್ಷಿ ಕೋಡಿಸೀಲ್ ಎಂದು ಬರೆದಿರುವುದರ ಬಗ್ಗೆ ನನಗೆ ಅರ್ಥ ಆಗಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 05.02.2004 ರ ದಾಖಲೆಯಲ್ಲಿ ಕೋಡಿಸೀಲ್ ಎಂದು ಬರೆದಿದೆಯಾ ಎಂದರೆ ಸಾಕ್ಷಿ ಎರಡೂ ದಾಖಲೆಗಳೂ ಸಹ ಮರಣ ಶಾಸನ ಪತ್ರ ಎಂದು ಉಲ್ಲೇಖ ಇದೆ ಎಂದು ನುಡಿಯುತ್ತಾರೆ. ದಿನಾಂಕ 05.02.2004 ರ ದಾಖಲೆ ಮರಣ ಶಾಸನ. ನಿ.ಪಿ.1 ಹಾಗೂ 2 ರ ಹೊರತಾಗಿ ನನ್ನ ಬಳಿ ಬೇರೆ ಯಾವುದೇ ಕೋಡಿಸೀಲ್ ತಂದೆ ಮಾಡಿರುವುದು ಇಲ್ಲ. ಬೇರೆ ಯಾರು ಮಾಡಿರುವ ಕೋಡಿಸೀಲ್ ನನ್ನ ಬಳಿ ಇದೆ ಎಂದರೆ ಸಾಕ್ಷಿ ಅದಕ್ಕೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಬೇರೆ ಆಸ್ತಿಗೆ ಸಂಬಂಧಿಸಿದಂತೆ ಕೋಡಿಸೀಲ್ ಇದೆಯಾ ಎಂದರೆ ಸಾಕ್ಷಿ ಈ ಪ್ರಶ್ನೆಗೂ ಅದು ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

13. ಪ್ರಾ.ಸಾ.2 ಹಾಗೂ 3 ನನ್ನ ತಂದೆಯ ಮರಣಾನಂತರದ ಅಂತಿಮ ಕಾರ್ಯಗಳಿಗೆ ಬಂದಿದ್ದಾರಾ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಪ್ರಾ.ಸಾ.2 ಹಾಗೂ 3, 2009 ರಲ್ಲಾದ ನನ್ನ ಮದುವೆಗೆ ಬಂದಿರಲಿಲ್ಲ. ನನ್ನ ಮಗಳು ಸಿಂಚನಾ ಹುಟ್ಟಿದ ನಂತರ ನಾಮಕರಣಕ್ಕೆ ಪ್ರಾ.ಸಾ.2 ಹಾಗೂ 3 ಬಂದಿದ್ದರಾ ಎಂದರೆ ಸಾಕ್ಷಿ ಈ

ಪ್ರಶ್ನೆಗೂ ಈ ಅರ್ಜಿಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. 2015 ರಲ್ಲಿ ನನ್ನ ಹೆಂಡತಿ ಗುಣಶೀಲ ಅವರ ವಿಚಾರದಲ್ಲಿ ತಕರಾರು ಆಗಿದ್ದ ಸಂದರ್ಭದಲ್ಲಿ ಫ್ರಾ.ಸಾ.2 ಹಾಗೂ 3 ಬಂದಿದ್ದರಾ ಎಂದರೆ ಸಾಕ್ಷಿ ನನ್ನ 2 ನೇ ಹೆಂಡತಿ ಗುಣಶೀಲಾ ಅಲಿಯಾಸ್ ಮೋನಿಕಾ ಅವರಿಗೂ ಫ್ರಾ.ಸಾ.2 ಹಾಗೂ 3 ರವರಿಗ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

14. ಖಾತೆ ಕಂದಾಯ ಮಾಡುವ ಸಂದರ್ದಲ್ಲಿ ನಾನು ವಿಲ್ಲಿನ ಆಧಾರದಲ್ಲಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮ್ಮ ಕುಟುಂಬದವರಿಗೆ ವಿಚಾರ ಗೊತ್ತಾಗಿ ವಿಶ್ವನಾಥ್, ಕಮಲೇಶ್, ರಾಮಯ್ಯ, ತ್ರಿವೇಣಿ ಹಾಗೂ ಮಾಲಾ ಎಲ್ಲರೂ ಸೇರಿ ಫ್ಯಾಕ್ಟರಿ ಬಳಿ ಬಂದು ಗಲಾಟೆ ಮಾಡಿ ಬಾಡಿಗೆದಾರರನ್ನು ಹೆದರಿಸಿ ಬೀಗ ಹಾಕಿಸಿ ಕರೆಂಟು ಕಿತ್ತು ಹಾಕಿಸಿ ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಅದೇ ರೀತಿ ನನ್ನ 2 ನೇ ಹೆಂಡತಿ ಗುಣಶೀಲ ಅವರ ಮುಖಾಂತರ ಸುಳ್ಳು ಪ್ರಕರಣ ದಾಖಲಿಸಿದ್ದರು. ಅದೇ ರೀತಿ ನನ್ನ ತಾಯಿ ಗಂಗಮ್ಮ ಸಹ ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದರು. ಈ ಎಲ್ಲಾ ಗಲಾಟೆ ಆದ ನಂತರ ಮನಸ್ತಾಪ ಆಯಿತು. ಈ ಅರ್ಜಿ ದಾಖಲಿಸುವ ಸಂದರ್ಭದಲ್ಲಿ ಅಂದರೆ ದಿನಾಂಕ 10.07.2015 ರ ಸಂದರ್ಭದಲ್ಲಿ ಸದರಿ ಪ್ರಕರಣಗಳು ದಾಖಲಾಗಿತ್ತೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಈ ಮೇಲೆ ಹೇಳಿದ ಎಲ್ಲಾ ತಕರಾರಿನ ವಿಚಾರವನ್ನು ಈ

ಅರ್ಜಿಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ಈ ಅರ್ಜಿಗೂ ಅದಕ್ಕೂ ಯಾವುದೇ ಸಂಬಂಧ ಇಲ್ಲ ಮತ್ತು ಬೇರೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ಅದಕ್ಕೂ ಹಾಗೂ ಈ ದಾವೆಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ರಾಮಯ್ಯ, ಗುಣಶೀಲ, ಕಮಲೇಶ್, ಗಂಗಮ್ಮ, ವಿಶ್ವನಾಥ ಹಾಗೂ ಇತರರು ನನ್ನ ಮೇಲೆ ಪ್ರಕರಣ ದಾಖಲಿಸಿದ ವಿಚಾರವನ್ನು ಈ ಅರ್ಜಿಯಲ್ಲಿ ತಿಳಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಅದಕ್ಕೂ ಹಾಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನಾನು ದಾಖಲುಪಡಿಸಿದ ಕ್ರಿಮಿನಲ್ ಪ್ರಕರಣಗಳ ನಂಬ್ರವನ್ನು ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಈ ಅರ್ಜಿಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಅವುಗಳಿಗೂ ಹಾಗೂ ಈ ಅರ್ಜಿಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

(ಪ್ರಶಾಂತಿ.ಜಿ)
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**